ದಿನಾಂಕ 16-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ವಾದಿ ಪರ ಶ್ರೀ. ಜೆ.ಆರ್. ವಕೀಲರಿಂದ

ಮಹ್ಮದ್ ಸಾಬ್ ನನಗೆ ಅಣ್ಣನಾಗಬೇಕು. ನನ್ನ ತಾತನ ಹೆಸರು ಗೂಡನಾಯಕ ಇರುತ್ತದೆ. ಗೂಡನಾಯಕರವರಿಗೆ ಇಬ್ಬರು ಮಕ್ಕಳಿರುತ್ತಾರೆ. ಆತನ ಮೊದಲನೇ ಮಗನ ಹೆಸರು ನನಗೆ ಗೊತ್ತಿಲ್ಲ. ನನ್ನ ತಂದೆಯ ಹೆಸರು ಮಹೆಬೂಬೂಬ್‌ಸಾಬ್ ಇರುತ್ತದೆ. ವಾದಿಗಳ ತಾತನ ಹೆಸರು ನನಗೆ ಗೊತ್ತಿಲ್ಲ. ನನ್ನ ತಾತನಾದ ಗೂಡನಾಯಕ ಈತನಿಗೆ 2 ಎಕರೆ ಜಮೀನು ಇತ್ತು. ಸಾಕ್ಷಿ ಮುಂದುವರೆದು ನನಗೂ 2 ಎಕರೆ ಜಮೀನು ಇತ್ತು ಎಂದು ನುಡಿಯುತ್ತಾರೆ. ನನ್ನ ದೊಡ್ಡಪ್ಪನ ಮಗನಾದ ಮೊಹ್ಮದ್ ಸಾಬ್ ಈತನು 8 ವರ್ಷದ ಹಿಂದೆ ತೀರಿಕೊಂಡಿರುತ್ತಾನೆ. ಮೊಹ್ಮದ್ ಸಾಬ್ ಈತನಿಗೆ ತಂಗಿ ಇದ್ದಳು ಎಂದರೆ ಸರಿಯಲ್ಲ. ಆಕೆಯ ಹೆಸರು ಮೋದಿನ್‌ಬೀ ಎಂದು ಇರುತ್ತದೆ

ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಮಕ್ಕಳಿರುತ್ತೇವೆ. ನನ್ನ ತಂದೆಗೆ ಮೂರು ಜನ ಹೆಣ್ಣುಮಕ್ಕಳು. ನನ್ನ ಅಣ್ಣನಾದ ಮಹ್ಮದ್‌ಸಾಬ್ ಯಥಾರೀತಿ ಇದ್ದು, ವ್ಯವಹಾರಿಕೆ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನಾದ ಮಹ್ಮದ್‌ಸಾಬ್ ಈತನು ತನ್ನ ಹೆಂಡತಿ ಮಕ್ಕಳ ಜೊತೆ ವಾಸವಾಗಿರಲಿಲ್ಲ ಎಂದರೆ ಸರಿ. ಮಹ್ಮದ್ ಸಾಬ್ ಈತನು ತನ್ನ ಹೆಂಡತಿ ಮಕ್ಕಳ ಜೊತೆ ಸಂಸಾರ ಮಾಡುತ್ತಿದ್ದನು.

ನನ್ನ ಅಣ್ಣನಾದ ಮಹ್ಮದ್ ಸಾಬ್ ಇತನು ವ್ಯವಹಾರವನ್ನು ಉಸ್ಮಾನ್‌ಸಾಬ್ ಮತ್ತು ಜಂಗ್ಲಿಸಾಬ್ ಈತನ ಸಮಕ್ಷಮ ಮಾಡಿದ್ದನು. ಖರೀದಿ ಪತ್ರ ಆಗುವ 1 ವಾರದ ಪೂರ್ವದಲ್ಲಿ ವ್ಯವಹಾರ ಮಾತನಾಡಿದ್ದನು. ಈ ವ್ಯವಹಾರವನ್ನು ನಮ್ಮ ಮನೆಯಲ್ಲಿ ಮಾತನಾಡಿರುತ್ತೇವೆ. ವ್ಯವಹಾರವನ್ನು 1 ಎಕರೆಗೆ ರೂ. 5000/- ರಂತೆ ಮಾತುಕತೆಯಾಗಿತ್ತು. ದಾವಾ ಆಸ್ತಿಯನ್ನು ರೂ. 10000/-ಕ್ಕೆ ಖರೀದಿ ಮಾಡಿರುತ್ತೇವೆ. ಖರೀದಿ ಮಾಡುವ ಪೂರ್ವದಲ್ಲಿ ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಸಂಚಕಾರ ಪತ್ರವನ್ನು ಮಾಡಿಕೊಂಡಿರಲಿಲ್ಲ. ಖರೀದಿ ಮಾಡುವ ವಿಷಯವನ್ನು ಮಹ್ಮದ್ ಸಾಬ್? ಈತನ ಹೆಂಡತಿಗೆ ತಿಳಿಸಿರುತ್ತೇನೆ. ಸಾಕ್ಷಿ ಮುಂದುವರೆದು ಆ ಸಂದರ್ಭದಲ್ಲಿ ವಾದಿಯರು ಜನಿಸಿರಲಿಲ್ಲ ಎಂದು ನುಡಿಯುತ್ತಾರೆ. ಮಹ್ಮದ್ ಸಾಬ್ ಈತನ ಹೆಂಡತಿಗೆ ಖರೀದಿ ಪತ್ರಕ್ಕೆ ಸಹಿ ಮಾಡುವಂತೆ ಕರೆದಿರಲಿಲ್ಲ. ಸಾಕ್ಷಿ ಮುಂದುವರೆದು ಆ ಸಂದರ್ಭದಲ್ಲಿ ಆತನ ಹೆಂಡತಿ ಊರಿನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ನನ್ನ ಅಣ್ಣನ ಹೆಂಡತಿಯ ಊರು ಕವಿತಾಳ ಗ್ರಾಮ ಇರುತ್ತದೆ.

ನನ್ನ ಜಮೀನನ್ನು ಖರೀದಿಸುವ ಪೂರ್ವದಲ್ಲಿ ನನ್ನ ಸಂಬಂಧಿಕರಿಗಾಗಲೀ ಅಥವಾ ಮಹ್ಮದ್? ಸಾಬ್?ಈತನ ಸಂಬಂಧಿಕರಿಗಾಗಲೇ ಹೇಳಿಲ್ಲ. ಈ ಜಮೀನನ್ನು ಖರೀದಿ ಮಾಡುವ ಪೂರ್ವದಲ್ಲಿ ನನ್ನ ಜಮೀನಿನ ಅಕ್ಕಪಕ್ಕ ಇದ್ದಂತಹ ಜಮೀನುದಾರರಿಗೆ ಕೇಳಿದ್ದೀರಾ ಎಂದರೆ ಸಾಕ್ಷಿಯು ದಾವಾ ಆಸ್ತಿಯ ಅಕ್ಕಪಕ್ಕದಲ್ಲಿದ್ದಂತಹ ಜಮೀನುದಾರರು ಆಸ್ತಿಯನ್ನು ಖರೀದಿ ಮಾಡುತ್ತೇವೆಂದು ಹೇಳಿದರು ಆದಕಾರಣ ನಾನು ಖರೀದಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ಮತ್ತು ವಾರದಂದು, ತಿಂಗಳಿನಂದು ಖರೀದಿ ಮಾಡಿರುತ್ತೇನೆ ಎಂದು ಹೇಳಲು ಆಗುವುದಿಲ್ಲ. ಖರೀದಿ ಮಾಡುವ ಸಂದರ್ಭದಲ್ಲಿ ಉಸ್ಮಾನ್‌ಸೊಬ್ ಮತ್ತು ಜಂಗ್ಲಿಸಾಬ್? ಮತ್ತು ಅಕ್ಬರ್‌ಸೊಬ್‌ಶಿವರು ಹಾಜರಿದ್ದರು. ಅವರನ್ನು ನಾನೇ ಕರೆದುಕೊಂಡು ಬಂದಿದ್ದೆ. ಸದರಿಯವರಲ್ಲಿ ಉಸ್ಮಾನ್‌ಸೊಬ್

ಜೀವಂತ ಇರುತ್ತಾನೆ. ಖರೀದಿ ಪತ್ರವನ್ನು ಬರೆಯಲು ನಾನೇ ಮಾಹಿತಿ ನೀಡಿದ್ದೆ. ಸದರಿ ಪತ್ರವನ್ನು ಪತ್ರ ಬರಹಗಾರರು ಬರೆದಿರುತ್ತಾರೆ. ಅವರ ಹೆಸರು ಹೇಳಲು ಬರುವುದಿಲ್ಲ. ನನ್ನ ಅಣ್ಣನು ನನ್ನ ಹತ್ತಿರ ಯಾವುದೇ ಹಣವನ್ನು ತೆಗೆದುಕೊಂಡು ಖರೀದಿ ಪತ್ರವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ವ್ಯವಹಾರ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ಮಹ್ಮದ್ ಸಾಬ್? ಈತನನ್ನು ನಾನು ನನ್ನ ಮನೆಯಲ್ಲಿಯೇ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ಆತನಿಗೆ ನಾನು ಹೇಳಿದಂತೆ ಕೇಳುವಂತೆ ಮಾಡಿದ್ದೆ ಎಂದರೆ ಸರಿಯಲ್ಲ. ಸದರಿಯವರ ಹೆಂಡತಿ ಮಕ್ಕಳಿಗೆ ಖರೀದಿ ಮಾಡಿರುವ ವಿಷಯವನ್ನು ತಿಳಿಸುತ್ತಿದ್ದೆ ಎಂದರೆ ಸಾಕ್ಷಿಯು ಸದರಿಯವರು ಆ ಸಂದರ್ಭದಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನಾನು ಮಹ್ಮದ್?ಸಾಬ್ ಈತನಿಗೆ ಹಣವನ್ನು ಕೊಟ್ಟು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಪತ್ರವನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಪ್ರತಿವಾದ ಪತ್ರದಲ್ಲಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿರುವ ಅಂಶಗಳ ಬಗ್ಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯನ್ನು ವಾದಿಗಳೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿಗಳ ಕಬ್ಜೆಯಲ್ಲಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಮೊದಲಿನಿಂದಲೂ ಮತ್ತು ಇಲ್ಲಿಯತನಕನೂ ವಾದಿಗಳೇ ಬಿತ್ತನೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು ಬಿತ್ತನೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ಮತ್ತು ನನ್ನ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಕಂದಾಯ ರಶೀದಿಗಳನ್ನು ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಯ ಚೆಕ್‌ಬಂದಿ ಗೊತ್ತಿರುತ್ತದೆ. ಪೂರ್ವದ ಕಡೆಗೆ ಆಲಂಸಾಬ್, ಪಶ್ಚಿಮದ ದಿಕ್ಕಿನಲ್ಲಿ ಮಾಬಮ್ಮ ಇವರ ಆಸ್ತಿ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಅಮರಯ್ಯನವರ ಆಸ್ತಿ ಬರುತ್ತದೆ. ನನಗೆ ಸೇರಿದ ಅರ್ಧ ಜಮೀನು ದಕ್ಷಿಣದ ಕಡೆಗೆ ಬರುತ್ತದೆ. ನನ್ನ ಆಸ್ತಿಯ ಚೆಕ್‌ಬಂದಿ ಸಹ ಈ ಮೇಲೆ ಹೇಳಿದ ರೀತಿ ಇರುತ್ತದೆ. ಸದರಿ ಚೆಕ್‌ಬಂದಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 2019 ರಿಂದ ವಾದಿಗಳೇ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಸದರಿಯವರ ಸ್ವಾಧೀನಕ್ಕೆ ನಾನು ತಕರಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಣ್ಣ ಇದ್ದಾಗ್ಯೂ ಸಹ ದಾವಾ ಆಸ್ತಿಯನ್ನು ನಾನೇ ಸಾಗುವಳಿ ಮಾಡುತ್ತಿದ್ದೆ.

ದಾವಾ ಆಸ್ತಿ ಸುಮಾರು 30 ವರ್ಷಗಳಿಂದ ನನ್ನ ಕಬ್ಜೆಯಲ್ಲಿರುತ್ತದೆ. ದಾವಾ ಆಸ್ತಿಯನ್ನು ನನ್ನ ಅಣ್ಣನಾದ ಮಹ್ಮದ್‌ಸಾಬ್ ಈತನು ಉಳುಮೆ ಮಾಡುತ್ತಾ ಸ್ವಾಧೀನದಲ್ಲಿದ್ದ ಎಂದರೆ ಸರಿಯಲ್ಲ.

ಪ್ರಶ್ನೆ : ನನ್ನ ಅಣ್ಣ ಜೀವಂತ ಇದ್ದಾಗ ಆತನಿಗೆ ವರ್ಷಕ್ಕೆ ಎಷ್ಟು ಗುತ್ತಿಗೆ ಮೊತ್ತವನ್ನು ಕೊಡುತ್ತಿದ್ದಿರಿ ಎಂದರೆ?

ಉತ್ತರ: ನನ್ನ ಅಣ್ಣನು ಜೀವಂತ ಇದ್ದಾಗ ನಾವೆಲ್ಲರೂ ಕೂಡಿ ಇದ್ದೇವು, ಬೇರೆಯಾಗಿ ಒಂದು ವರ್ಷದೊಳಗೆ ಮಾರಾಟ ಮಾಡಿರುತ್ತಾನೆಂದು ನುಡಿಯುತ್ತಾರೆ.

ಸದರಿ ಸಂದರ್ಭದಲ್ಲಿ ಯಾವುದೇ ಪತ್ರಗಳು ಆಗಿರುವುದಿಲ್ಲ. ನಾನು ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ಎಂದರೆ ಬೇರೆಯಾಗುವ ಪೂರ್ವದಲ್ಲಿ ನಾನು ಮತ್ತು ನನ್ನ ಅಣ್ಣನಾದ ಮಹ್ಮದ್‌ಸಾಬ್ ಈತನು ಒಂದೇ ಮನೆಯಲ್ಲಿದ್ದೇವು ಎಂದರೆ ಸರಿ. ಆ ಸಂದರ್ಭದಲ್ಲಿ ನನ್ನ ಅತ್ತಿಗೆ ನಮ್ಮ ಹತ್ತಿರ ಇರಲಿಲ್ಲ. ಒಂದು ವರ್ಷ ಅವಧಿಯ ನಂತರ ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ನನ್ನ ಅತ್ತಿಗೆಗೆ ಖರೀದಿ ವಿಚಾರವನ್ನು ತಿಳಿಸಿರಲಿಲ್ಲ. ಸಾಕ್ಷಿ ಮುಂದುವರೆದು ನನ್ನ ಆಸ್ತಿಯನ್ನು ನಾನು ಮಾರಾಟ ಮಾಡಿದ್ದೇನೆ ಎಂದು ಹೇಳಿದ್ದ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ನನ್ನ ಮತ್ತು ನನ್ನ ಅಣ್ಣನ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ನನ್ನ ಅಣ್ಣನಿಗೆ ದಾವಾ ಆಸ್ತಿಯನ್ನು ನನಗೆ ಮಾರಾಟ ಮಾಡುವ ಯಾವುದೇ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಅಣ್ಣನು ನನಗೆ ಆಸ್ತಿಯನ್ನು ಮಾರಾಟ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಎಲ್ಲಾ ದಾಖಲೆಗಳನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.